ಇ) ಪ್ರಸಕ್ತ ಸಾಲಿನ (1992-93) ಆಯವ್ಯಯದಲ್ಲಿ ಪೂರ್ವಭಾವಿ ಕೆಲಸಗಳಿಗಾಗಿ 30 ಲಕ್ಷ ರೂ.ಗಳನ್ನು ಒದಗಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ತಾ।। 22.3.93ರ ಲಿಖಿತ ಮೂಲಕ ಉತ್ತರಿಸಿರುವ 24ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 2161, 1663, 1952, 2126, 2200, 2195, 2228, 2250, 2251,1156 ಮತ್ತು 2052 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮೂಡಿಗೆರೆ ತಾಲ್ಲೂಕು ಉಪಗ್ರಾಮಗಳಿಗೆ ವಿದ್ಯುತ್ತೀಕರಣ

242: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆಯಿದ್ದು, 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ;

ಆ) ಇಂತಹ ಗ್ರಾಮಗಳಿಗೆ ಸರ್ಕಾರ ವಿದ್ಯುದ್ದೀಕರಣ ಮಾಡಲು ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಮೂಡಿಗೆರೆ ತಾಲ್ಲೂಕಿನಲ್ಲಿ 8 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆ ಇದ್ದು 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ.

ಆ) ಇಂತಹ ಗ್ರಾಮಗಳನ್ನು ವಿದ್ಯುದ್ದೀಕರಣ ಮಾಡಲು ಮಂಡಳಿಯು ತನ್ನ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳುವುದು.

ಮೂಡಿಗೆರೆಯಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ

2004: ಶ್ರೀಮಾತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ ಮಾಡಿದ್ದು ಯಾವಾಗ, ಯಾವ ಉದ್ದೇಶಕ್ಕಾಗಿ ಸ್ಥಾಪನೆ ಮಾಡಲಾಯಿತು.

ಆ) ಇದರಿಂದ ಎಷ್ಟು ಲಿಫ್ಟ್ ಇರಿಗೇಷನ್ ಸ್ಕೀಮ್ ಮಂಜೂರು ಮಾಡಲಾಗಿದೆ ? ಇವುಗಳು ಯಾವ ಹಂತದಲ್ಲಿವೆ;

ಇ) ಮೂಡಿಗೆರೆ ಉದುಸೆ ಲಿಫ್ಟ್ ಇರಿಗೇಷನ್ ಯೋಜನೆಯ ಕೆಲಸವು ಪ್ರಾರಂಭಿಸದಿರಲು ಕಾರಣವೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಕಾವೇರಿ ಬೇಸಿನ್ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನನ್ನು ದಿನಾಂಕ 2-6-86ರಂದು ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಕೃಷ್ಣಾ ಬೇಸಿನ್ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ನನ್ನು ದಿನಾಂಕ 9-6-86 ರಂದು ಬಿಜಾಪುರದಲ್ಲಿ ಸ್ಥಾಪಿಸಲಾಯಿತು.

ವಾಣಿಜ್ಯ ಸಂಸ್ಥೆಗಳಿಂದ ಸಾಲ ಪಡೆದು ಏತ ನೀರಾವರಿ ಯೋಜನೆಗಳ ಮೂಲಕ ಹೆಚ್ಚಿನ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲು ಸದರಿ ನಿಗಮಗಳನ್ನು ಸ್ಥಾಪಿಸಿದೆ.

ಆ) ಕಾವೇರಿ ಜಲಾನಯನ ಏತ ನೀರಾವರಿ ನಿಗಮದಲ್ಲಿ 17ಯೋಜನೆ ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ಯೋಜನೆ ನಿಗಮದಲ್ಲಿ 8 ಯೋಜನೆಗಳು ಮಂಜೂರಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಈ ಯೋಜನೆಯ ಅಂದಾಜನ್ನು ನಬಾರ್ಡ್‌ಗೆ ಸಲ್ಲಿಸಿದ್ದು ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ರಸ್ತೆಗಳು

2161: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯೊಳಗೆ ಬರುವ ರಾಷ್ಟ್ರೀಯ ಹೆದ್ದಾರಿ ರಸ್ತೆ, ರಾಜ್ಯ ಹೆದ್ದಾರಿ ರಸ್ತೆ, ಎಂಡಿಆರ್ ರಸ್ತೆಗಳ ಉದ್ದವೆಷ್ಟು; (ಪ್ರತ್ಯೇಕ ವಿವರ ನೀಡುವುದು);

ಆ) ಅವುಗಳ ಅಭಿವೃದ್ಧಿಗೆ ಒದಗಿಸುವ ಹಣವೆಷ್ಟು;

ಇ) ಜಿಲ್ಲಾ ಪರಿಷತ್ ವ್ಯಾಪ್ತಿ ಒಳಗೆ ಬರುವ ಓಡಿಆರ್ ರಸ್ತೆ, ಹಳ್ಳಿ ಹೆದ್ದಾರಿ, ಹರಿಜನ, ಗಿರಿಜನವಾಡ್ ರಸ್ತೆಗಳು ಎಷ್ಟು ಕಿ.ಮೀ; ಇವುಗಳ ದುರಸ್ತಿಗಾಗಿ ಒದಗಿಸುವ ಹಣವೆಷ್ಟು;

ಈ) ಈ ಮೇಲಿನ ಎರಡು ಇಲಾಖೆ ವ್ಯಾಪ್ತಿಯೊಳಗೆ ಬರುವ ರಸ್ತೆಗಳ ಉಸ್ತುವಾರಿಗಾಗಿ ಇರುವ ಗ್ಯಾಂಗ್ ಮ್ಯಾನ್‌ಗಳೆಷ್ಟು ಎಷ್ಟು ಕಿ.ಮೀ ರಸ್ತೆಗೆ ಒಬ್ಬ ಗ್ಯಾಂಗ್ ಮ್ಯಾನ್ ಇರಬೇಕಾಗುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ರಸ್ತೆಗಳ ಉದ್ದ:–

1) ರಾಷ್ಟ್ರೀಯ ಹೆದ್ದಾರಿಯ ಉದ್ದ	–	ಇಲ್ಲ
2) ರಾಜ್ಯದ ಹೆದ್ದಾರಿ ಉದ್ದ	–	151 ಕಿ.ಮೀ
3) ಜಿಲ್ಲಾ ಮುಖ್ಯ ರಸ್ತೆ ಉದ್ದ	–	128 ಕಿ.ಮೀ
		279 ಕಿ.ಮೀ

ಆ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟು 41.80 ಲಕ್ಷ ರೂ. ಅನುದಾನ ಒದಗಿಸಿದೆ.

ಇ) ಜಿಲ್ಲಾ ಪರಿಷತ್ ವ್ಯಾಪ್ತಿಯೊಳಗೆ ಬರುವ ರಸ್ತೆಗಳ ಒಟ್ಟು ಉದ್ದ – 3,611.35 ಕಿ.ಮೀ ಇರುತ್ತಿದ್ದು ಇವುಗಳ ದುರಸ್ತಿಗೆ ಒಟ್ಟು 85.31 ಲಕ್ಷ ರೂ. ಅನುದಾನ ಒದಗಿಸಲಾಗಿದೆ.